# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/327/ಗ್ರಾಪಂಅ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:29-06-2012

## ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿಗಳ ತೆರಿಗೆಗಳನ್ನು ಪರಿಷ್ಕರಿಸುವ ಮತ್ತು ವಸೂಲಾತಿ ಮಾಡುವ ಬಗ್ಗೆ ಮಾರ್ಗಸೂಚಿಗಳು.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 190 ಗ್ರಾಪಂಅ 2010 ದಿನಾಂಕ:14-05-2012.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಲ್ಲಿ ಹಾಗೂ ಅದರಡಿಯಲ್ಲಿ ರಚಿಸಲಾದ ಕರ್ನಾಟಕ ಪಂಚಾಯತ್ (ಗ್ರಾಮ ಪಂಚಾಯಿತಿಗಳ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994 ರಲ್ಲಿ ಗ್ರಾಮ ಪಂಚಾಯಿತಿಗಳು ಪಂಚಾಯಿತಿ ವ್ಯಾಪ್ತಿ ಪ್ರದೇಶದ ಪರಿಮಿತಿಯಲ್ಲಿ ತೆರಿಗೆ ವಿಧಿಸಲು ಹಾಗೂ ಪ್ರತಿ 4 ವರ್ಷಗಳಿಗೊಮ್ಮೆ ತೆರಿಗೆ ಪರಿಷ್ಕರಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖಿತ ಸುತ್ತೋಲೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈಗಾಗಲೇ ನಿಯಮಗಳು ಹಾಗೂ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನದಂತೆ ಸಮಿತಿಗಳನ್ನು ರಚಿಸಿ 2012-13ನೇ ಸಾಲಿನಲ್ಲಿ ತೆರಿಗೆ ಪರಿಷ್ಕರಣೆಯನ್ನು ಕಡ್ಡಾಯವಾಗಿ ಕೈಗೊಳ್ಳುವಂತೆ ಸೂಚಿಸಲಾಗಿದೆ. ಆದಾಗ್ಯೂ ತೆರಿಗೆ ಪರಿಷ್ಕರಣೆ ಹಾಗೂ ಕರ ವಸೂಲಾತಿ ಕಾರ್ಯಕ್ರಮವು ಸಮರ್ಪಕವಾಗಿ ನಡೆಯುತ್ತಿಲ್ಲದಿರುವುದು ತೆರಿಗೆ ವಸೂಲಾತಿ ಮತ್ತು ಬಾಕಿ ತ:ಖ್ತೆಯಿಂದ ತಿಳಿದು ಬರುತ್ತಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಕಾರ್ಯ ಹಂಚಿಕೆಯಲ್ಲಿ ಕರ ವಸೂಲಾತಿ ಹೊಣೆಗಾರಿಕೆಯನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ನಿಗದಿಪಡಿಸಲಾಗಿದ್ದು, ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು ಬಿಲ್ ಕಲೆಕ್ಟರ್‌ನ ಸಹಕಾರದಿಂದ ಕರ ವಸೂಲಾತಿ ಕೆಲಸ ನಿರ್ವಹಿಸಲು ಈ ಕೆಳಕಾಣಿಸಿದಂತೆ ಗುರಿ ನಿಗದಿಪಡಿಸಲಾಗಿದೆ.

1. ರೂ.3.00 ಲಕ್ಷಗಳವರೆಗೆ ವಾರ್ಷಿಕ ಟ್ಯಾಕ್ಸ್ ಡಿಮ್ಯಾಂಡ್ ಇರುವ ಗ್ರಾಮ ಪಂಚಾಯತಿಗಳಿಗೆ ಪ್ರತಿ ತಿಂಗಳೂ ರೂ.15,000/- ಗಳನ್ನು ಕಡ್ಡಾಯವಾಗಿ ವಸೂಲಿ ಮಾಡತಕ್ಕದ್ದು. (ವಾರ್ಷಿಕವಾಗಿ ರೂ.1.80 ಲಕ್ಷ)

2. ರೂ.3.00 ಲಕ್ಷದಿಂದ 6.00 ಗಳವರೆಗೆ ವಾರ್ಷಿಕ ಟ್ಯಾಕ್ಸ್ ಡಿಮ್ಯಾಂಡ್ ಇರುವ ಗ್ರಾಮ ಪಂಚಾಯತಿಗಳಿಗೆ ಪ್ರತಿ ತಿಂಗಳೂ ರೂ.25,000/- ಗಳನ್ನು ಕಡ್ಡಾಯವಾಗಿ ವಸೂಲಿ ಮಾಡತಕ್ಕದ್ದು. (ವಾರ್ಷಿಕವಾಗಿ ರೂ.3.00 ಲಕ್ಷ)

3. ರೂ.6.00 ಲಕ್ಷದಿಂದ 10.00 ಗಳವರೆಗೆ ವಾರ್ಷಿಕ ಟ್ಯಾಕ್ಸ್ ಡಿಮ್ಯಾಂಡ್ ಇರುವ ಗ್ರಾಮ ಪಂಚಾಯತಿಗಳಿಗೆ ಪ್ರತಿ ತಿಂಗಳೂ ರೂ.35,000/- ಗಳನ್ನು ಕಡ್ಡಾಯವಾಗಿ ವಸೂಲಿ ಮಾಡತಕ್ಕದ್ದು. (ವಾರ್ಷಿಕವಾಗಿ ರೂ.4.20 ಲಕ್ಷ)

4. ಸಾರ್ವಜನಿಕರಿಗೆ ನೀರಿನ ಸಂಪರ್ಕ ನೀಡಲಾಗಿದ್ದು, ಬಿಲ್ ಪಾವತಿಯಾಗುತ್ತಿಲ್ಲ. ಬಿಲ್ ಪಾವತಿ ಮಾಡದಿರುವವರಿಗೆ ನೀರಿನ ಸಂಪರ್ಕ ಕಡಿತಗೊಳಿಸಲು ಕ್ರಮಕೈಗೊಳ್ಳತಕ್ಕದ್ದು.

5. ಬಿಲ್ ಕಲೆಕ್ಟರ್‌ಗಳಿಗೆ ಪ್ರತಿ ತಿಂಗಳು ಸಂಬಳ ಬಟಾವಡೆ ಬದಲು ಅನುದಾನದ ಶೇಕಡ 40 ರಷ್ಟು ಮೊತ್ತ ಮತ್ತು ಕರ ವಸೂಲಾತಿ ಮೊತ್ತದಲ್ಲೇ Proportionate (ಕರ ವಸೂಲಾತಿ ಆಧಾರದ ಮೇಲೆ) ಸಂಬಳ ಪಾವತಿಯಾಗತಕ್ಕದ್ದು. ಈ ಮಾಹಿತಿಯನ್ನು ಕಡ್ಡಾಯವಾಗಿ ಪಂಚತಂತ್ರದಲ್ಲಿ ಅಳವಡಿಸತಕ್ಕದ್ದು.

6. ಬಿಲ್ ಕಲೆಕ್ಟರ್‌ನು ಪ್ರತಿ ದಿನ ಕಡ್ಡಾಯವಾಗಿ ಒಂದು ಗ್ರಾಮಕ್ಕೆ ತೆರಳಿ ಕರ ಸಂಗ್ರಹ ಮಾಡತಕ್ಕದ್ದು. ಬಿಲ್ ಕಲೆಕ್ಟರನು ಕೆಲಸದ ನಿರ್ವಹಿಸಿದ ಬಗ್ಗೆ ಮತ್ತು ಪ್ರಗತಿ ಬಗ್ಗೆ ದಿನಚರಿಯಲ್ಲಿ ನಮೂದಿಸಬೇಕಾಗಿದ್ದು, ಆತನಿಗೆ ಸಂಬಳ ನೀಡುವ ಮೊದಲು ದಿನಚರಿಯನ್ನು ಪರಿಶೀಲಿಸತಕ್ಕದ್ದು.

7. ಕಾರ್ಯದರ್ಶಿಯು ಪ್ರತಿ ತಿಂಗಳಿನಲ್ಲಿ ಒಂದು ದಿನ ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯ ಪ್ರತಿ ಹಳ್ಳಿಗೂ ತೆರಳಿ ಕರ ಸಂಗ್ರಹ ಕೆಲಸದಲ್ಲಿ ಭಾಗವಹಿಸತಕ್ಕದ್ದು. ಕಾರ್ಯದರ್ಶಿಯು ಸಹ ದಿನಚರಿಯನ್ನು ನಿರ್ವಹಿಸಿ ಅದರಲ್ಲಿ ಪ್ರಗತಿಯನ್ನು ದಾಖಲಿಸತಕ್ಕದ್ದು.

8. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯ ಪ್ರತಿ ಹಳ್ಳಿಗೂ ತೆರಳಿ ಕರ ಸಂಗ್ರಹ ಕೆಲಸದಲ್ಲಿ ಭಾಗವಹಿಸತಕ್ಕದ್ದು.

9. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ವರ್ಷಕ್ಕೊಮ್ಮೆ ಸುಗ್ಗಿಯ ಸಂದರ್ಭದಲ್ಲಿ ಸಾಮೂಹಿಕವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತಿ ಹಳ್ಳಿಗೂ ಭೇಟಿ ನೀಡಿ ಕರ ಸಂಗ್ರಹ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳತಕ್ಕದ್ದು.

ತೆರಿಗೆ ವಸೂಲಾತಿ ಬಗ್ಗೆ ಆಡಳಿತಾತ್ಮಕವಾಗಿ ಈ ಕೆಳಕಂಡ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1. ಗ್ರಾಮ ಪಂಚಾಯಿತಿಗಳ ತೆರಿಗೆ ಪರಿಷ್ಕರಣೆ ಮಾಡುವ ಬಗ್ಗೆ ಸರ್ಕಾರದ ಸುತ್ತೋಲೆ ದಿನಾಂಕ: 24-05-2003 ರಲ್ಲಿನ ಮಾರ್ಗಸೂಚಿಗಳಂತೆ ತೆರಿಗೆ ಪರಿಷ್ಕರಣೆ ಮಾಡತಕ್ಕದ್ದು.

2. ಸರ್ಕಾರದ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯ ಕೇಂದ್ರ ಸ್ಥಾನದಲ್ಲಿ ವಾಸವಿರತಕ್ಕದ್ದು.
3. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಬೆಳಿಗ್ಗೆ 8.00 ಗಂಟೆಯಿಂದ ಸಾಯಂಕಾಳ ಕೆಲಸ ಮುಗಿದ ನಂತರವೂ ಸಾರ್ವಜನಿಕರಿಗೆ ಕಡ್ಡಾಯವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಾಗತಕ್ಕದ್ದು.
4. ಸಾರ್ವಜನಿಕರಿಗೆ ಮನೆ, ನಿವೇಶನ, ಇತ್ಯಾದಿಗಳ ಬಗ್ಗೆ ದಾಖಲೆ/ಮಾಹಿತಿ ಪೂರೈಸಬೇಕಾದರೆ ಸಂಬಂಧಿಸಿದ ವ್ಯಕ್ತಿಯಿಂದ ಕರ ವಸೂಲಿಯಾದ ಬಗ್ಗೆ ಖಚಿತಪಡಿಸಿಕೊಂಡು ದಾಖಲೆ ಪೂರೈಸತಕ್ಕದ್ದು. ದಾಖಲೆಗೆ ಬಿಲ್ ಕಲೆಕ್ಟರ್‌ನು ಕೌಂಟರ್ ಸಹಿ ಮಾಡಿರಬೇಕು.
5. ಕರ ವಸೂಲಾತಿ ಕಾರ್ಯದಲ್ಲಿ ಪ್ರಗತಿ ಸಾಧಿಸಿದ ಸಿಬ್ಬಂದಿಗೆ ಹಾಗೂ ಗ್ರಾಮ ಪಂಚಾಯಿತಿಗೆ ಪ್ರೋತ್ಸಾಹ ಧನ ನೀಡತಕ್ಕದ್ದು.
6. ಬಿಲ್ ಕಲೆಕ್ಟರ್‌ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸದಲ್ಲಿ ಭಾಗಿಯಾಗತಕ್ಕದ್ದಲ್ಲ.

ಮೇಲೆ ತಿಳಿಸಿರುವಂತೆ ಕರ ಪರಿಷ್ಕರಣೆ ಹಾಗೂ ಕರ ವಸೂಲಾತಿ ಬಗ್ಗೆ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳತಕ್ಕದ್ದೆಂದು ಸೂಚಿಸಿದೆ. ಇಲ್ಲವಾದಲ್ಲಿ ಈ ವರ್ಷದ 13ನೇ ಹಣಕಾಸು ಆಯೋಗದ ಅನುದಾನದಲ್ಲಿ ತಪ್ಪಿತಸ್ಥ ಗ್ರಾಮ ಪಂಚಾಯಿತಿಗಳಿಗೆ ಅನುದಾನ ಲಭ್ಯವಾಗುವುದಿಲ್ಲವೆಂದು ಮತ್ತೊಮ್ಮೆ ಸೂಚಿಸಿದೆ.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
2. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು,
3. ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್), ಗ್ರಾ.ಅ.ಪ. ಇಲಾಖೆ ರವರ ಆಪ್ತ ಕಾರ್ಯದರ್ಶಿ ರವರ ಮಾಹಿತಿಗಾಗಿ.